ಶ್ರೀ ಬಿ.ಎಸ್. ಯಡಿಯೂರಪ್ಪ : ಉತ್ತರಪತ್ರಿಕೆಗಳು ಖಾಲೀ ಇರುವಂಥದ್ದನ್ನು ರಿಜಿಸ್ಟರ್‌ನಂಬರ್ ಸಹಿತ ನಿಮಗೆ ಕಳುಹಿಸಿಕೊಡುತ್ತೇನೆ. ರಾಜ್ಯದ ಪರೀಕ್ಷೆಗಳಲ್ಲಿ ಯಾವುದು ಪೇಪರ್ ಕೊಟ್ಟಿದ್ದಾರೆ ಅದನ್ನು ನಿಮಗೆ ಕೊಡುತ್ತೇನೆ. ಖಾಲೀ ಪೇಪರ್‌ಗಳನ್ನು ಇವತ್ತು ಎಲ್ಲಾ ಕಡೆಯೂ ಹಂಚುತ್ತಿದ್ದಾರೆ ಅದಕ್ಕೆ ಇವತ್ತು ಹೊಸದಾಗಿ ಉತ್ತರಗಳನ್ನು ತುಂಬಿ ಕೊಡುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದನ್ನು ವಿಚಾರಣೆ ಮಾಡೋಣ. ಅದು fabricated, forged ಆಗಿದ್ದರೆ, you may enjoy the immunity ; but perhaps those people who are responsible, will have to be found out. We will request the KPSC for an enquiry.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ಈ ಅವ್ಯವಹಾರವನ್ನು ಮುಚ್ಚಿ ಹಾಕುವುದರ ಜೊತೆಗೆ ಶಾಮೀಲಾಗಿ ಬೇಕುಬೇಕಾದವರಿಗೆ ಉದ್ಯೋಗವನ್ನು ಕೊಡಿಸುವುದಕ್ಕೋಸ್ಕರ ಕೋಟಿಗಟ್ಟಲೆ ಲೂಟಿ ಮಾಡಲಿಕೆ ಹೊರಟಿದ್ದಾರೆ. ಕೆ.ಪಿ.ಎಸ್‌ಸಿ ಕಾರ್ಯದರ್ಶಿ ಅಪರಾಧಿಗಳಲ್ಲಿ ಮೊದಲನೆ ಅಪರಾಧಿ. ಇದನ್ನು ಮುಚ್ಚಿಹಾಕುವುದಕ್ಕೆ ತಾವು ಪ್ರಯತ್ನ ಪಡುತ್ತಿದ್ದೀರಿ. ನೀವು ಅಧಿಕಾರದಲ್ಲಿ ಒಂದು ಕ್ಷಣ ಮುಂದುವರೆಯುವುಕ್ಕೆ ನಿಮಗೆ ನೈತಿಕ ಹಕ್ಕಿಲ್ಲ. ರಾಜೀನಾಮೆಯನ್ನು ಕೊಟ್ಟು ಮನೆಗೆ ಹೋಗಿ.

(ಹಂತದಲ್ಲಿ ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಸಭಾತ್ಯಾಗ ಮಾಡಿದರು.)

ಶ್ರೀ ಎಂ. ವೀರಪ್ಪ ಮೊಯಿಲಿ : ಈಶ್ವರಪ್ಪನವರೇ, ನೀವು ಈ ಪೇಪರ್ ಮಾರಾಟ ಮಾಡುವುದಲ್ಲ, ಈ ರೀತಿಯಲ್ಲಿ ನೀವು ಜಾತಿಯ ವಾದವನ್ನು ಕೆಣಕಿ ದೇಶವನ್ನು ಮಾರಾಟ ಮಾಡುತ್ತೀರಿ, ದೇಶದ ಮಾನಮರ್ಯಾದೆಯನ್ನು ಮಾರಾಟ ಮಾಡುತ್ತಿದ್ದೀರಿ.

ಅಧ್ಯಕ್ಷರು : ಈಶ್ವರಪ್ಪನವೇರೇ, ಇಲ್ಲಿ ನಿಂತು ಮಾತನಾಡುವುದು ಉಚಿತವಲ್ಲ ತಾವು ತಮ್ಮ ಆಸನದ ಬಳಿ ಹೋಗಿ.

ಶ್ರೀ ಕೆ. ಎಸ್. ಈಶ್ವರಪ್ಪ : ಖಾಲೀ ಪತ್ರಿಕೆಯನ್ನು ಮಾರಾಟ ಮಾಡಿದ್ದಾರೆ. ಅದರಲ್ಲಿ ಬೇಕಾದನ್ನು ಬರೆಯಬಹದು, ಬೇಕಾದನ್ನು ತೂರಿಸಿಕೊಳ್ಳಬಹುದು.

ಶ್ರೀ ವಾಟಾಳ್ ನಾಗರಾಜ್ : ಅದನ್ನು ಸಮಗ್ರ ತನಿಖೆ ಮಾಡಿ ಸ್ವಾಮಿ.

ಶ್ರೀ ಕೆ. ಎಸ್. ಈಶ್ವರಪ್ಪ : ಇದನ್ನು ಕೇವಲ ಮುಸಲ್ಮಾನರ ತೃಪ್ತಿಗೋಸ್ಕರ .....,

(ಮುಂದಲ)